## ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-
5700117

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2017-18/ ಆ್ಯ.123 ದಿನಾಂಕ: 16.09.2017

### -: ಜನ ಸಂಪರ್ಕ ಸಭೆಯ ನಡಾವಳಿ :-

ದಿನಾಂಕ 29/08/2017 ರ ಬೆಳಿಗ್ಗೆ 11:00 ಘಂಟೆಗೆ ಹನೂರು ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಹನೂರು ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು**

1. ಶ್ರೀ.ಕೆ.ರಾಮಚಂದ್ರ : ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮೈಸೂರು.
2. ಶ್ರೀಮತಿ ತಾರಾ ಎಸ್. : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮೈಸೂರು.
3. ಶ್ರೀ.ಲಿಂಗರಾಜು : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗ ಕಛೇರಿ, ಕೊಳ್ಳೇಗಾಲ.
4. ಶ್ರೀಮತಿ ಜೆ.ದೀಪಾ ಗಾಂಧಿ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹನೂರು ಉಪವಿಭಾಗ.
5. ಶ್ರೀ.ಬಿ.ರಂಗಸ್ವಾಮಿ : ಸಹಾಯಕ ಇಂಜಿನಿಯರ್(ವಿ), ತಾಂತ್ರಿಕ ಶಾಖೆ, ಹನೂರು ಉಪವಿಭಾಗ.
6. ಶ್ರೀ.ಎಸ್.ಮಹೇಶ್ : ಪ್ರಭಾರ ಸಹಾಯಕ ಇಂಜಿನಿಯರ್(ವಿ), ಹನೂರು ಶಾಖೆ, ಹನೂರು ಉಪವಿಭಾಗ.
7. ಶ್ರೀ.ಟಿ.ಸಂತೋಷ್ : ಕಿರಿಯ ಇಂಜಿನಿಯರ್(ವಿ), ರಾಮಾಪುರ ಶಾಖೆ, ಹನೂರು ಉಪವಿಭಾಗ.
8. ಶ್ರೀ.ಬಿ.ಬಿ.ನಾಗರಾಜು : ಪ್ರಭಾರ ಕಿರಿಯ ಇಂಜಿನಿಯರ್(ವಿ), ಮಹದೇಶ್ವರ ಬೆಟ್ಟ ಶಾಖೆ. ಹನೂರು ಉಪವಿಭಾಗ.
9. ಶ್ರೀ.ಆರ್.ಭಾಸ್ಕರ್ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಲೊಕ್ಕನಹಳ್ಳಿ ಶಾಖೆ, ಹನೂರು ಉಪವಿಭಾಗ.
10. ಶ್ರೀ.ಎಸ್.ವೆಂಕಟೇಶಮೂರ್ತಿ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಕೌದಳ್ಳಿ ಶಾಖೆ, ಹನೂರು ಉಪವಿಭಾಗ.
11. ಶ್ರೀ.ಕೆ.ಎಸ್.ನಾಗಭೂಷಣ : ಪ್ರಭಾರ ಹಿರಿಯ ಸಹಾಯಕ, ಕಂದಾಯ ಶಾಖೆ. ಹನೂರು ಉಪವಿಭಾಗ.

**ದಿನಾಂಕ 24.05.2017 ರಂದು ಹನೂರು ಉಪವಿಭಾಗದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಬಾಕಿ ಉಳಿದಿರುವ ದೂರುಗಳ ವಿವರ**

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಸರಣೆ |
|---|---|---|---|
| 1 | ಕರಿಯಪ್ಪ, ಅಧ್ಯಕ್ಷರು, ರೈತ ಸಂಘ, ಚಂಗಡಿ | *ಕೆಲವು ಕಡೆಗಳಲ್ಲಿ ಕಬ್ಬಿಣದ ಕಂಬಗಳಿದ್ದು ಅವುಗಳನ್ನು ಬದಲಾಯಿಸಲು ಕ್ರಮ ಕೈಗೊಂಡಿರುವುದಿಲ್ಲ. | *ಕಬ್ಬಿಣದ ಕಂಬಗಳನ್ನು ಬದಲಾಯಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ದಿ:07.08.17 ರಂದು ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. |
| 2 | ಮಹೇಂದ್ರಗುರು, ಕಣ್ಣೂರು | *ಕಣ್ಣೂರು ಗ್ರಾಮದಲ್ಲಿ ಕೆಲವು ಕಡೆಗಳಲ್ಲಿ ವಾಹಕವು ಜೋತು ಬಿದ್ದಿದ್ದು ಸರಿಪಡಿಸಲು ಕೋರಿರುತ್ತಾರೆ. | *ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಅನುಮೋದನೆಗಾಗಿ ವಿಭಾಗೀಯ ಕಛೇರಿಗೆ ಕಳುಹಿಸಲಾಗಿದೆ. |
| 3 | ವೆಂಕಟೇಶ್, ಹನೂರು | *ಹನೂರು ಪಟ್ಟಣದ ಜಿ.ವಿ.ಗೌಡ ಕಾಲೇಜಿನ ಹತ್ತಿರ ವೋಲ್ಟೇಜ್ ತುಂಬಾ ಕಡಿಮೆ ಇದ್ದು ಸರಿಪಡಿಸಲು ಕೋರಿರುತ್ತಾರೆ. | *ಉಗ್ರಾಣದಲ್ಲಿ ಸಾಮಾಗ್ರಿಗಳ ಕೊರತೆಯಿಂದ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ, ಸಾಮಾಗ್ರಿಗಳು ಲಭ್ಯತೆ ನಂತರ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. |

ದಿನಾಂಕ 29.08.2017 ರಂದು ಪಡೆದ ದೂರುಗಳ ವಿವರ:-

| ಕ್ರಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಸರಣೆ |
|---|---|---|---|
| 1 | ರಂಗಶೆಟ್ಟಿ, ಅಜ್ಜೀಪುರ. | *ಅಜ್ಜೀಪುರದಲ್ಲಿ ನಿರಂತರ ಜ್ಯೋತಿಯ ವಿದ್ಯುತ್ ಮಾರ್ಗವನ್ನು ಪೂರ್ಣ ಪ್ರಮಾಣದಲ್ಲಿ ಚಾಲನೆಗೊಳಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. | *ಕೆಲವು ಭಾಗಗಳಲ್ಲಿ ನಿರಂತರ ಜ್ಯೋತಿ ಯೋಜನೆಯ ವಿದ್ಯುತ್ ಮಾರ್ಗವನ್ನು ಚಾಲನೆಗೊಳಿಸಲಾಗಿದ್ದು ಉಳಿದ ಭಾಗಗಳಿಗೆ ಮಾರ್ಗವನ್ನು ವಿಸ್ತರಿಸಲು ಅಂದಾಜು ಪಟ್ಟಿ ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸಲಾಗಿದೆ. |
| 2 | ವಿನೋದ್ ಕುಮಾರ್, ಕರವೇ ಅಧ್ಯಕ್ಷರು, ಹನೂರು, | *ದಿನಾಂಕ:09.09.2011 ರಲ್ಲಿ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿ ಮಾಡಲಾಗಿದ್ದು, ಇದುವರೆವಿಗೂ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ. | * ಅಕ್ರಮ-ಸಕ್ರಮ ಯೋಜನೆಯಲ್ಲಿ ಈಗಾಗಲೇ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ನೀಡಲಾಗಿದ್ದು ಜೇಷ್ಠತೆ ಆಧಾರದಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಸೂಚಿಸಲಾಗಿದ್ದು ಮುಂದಿನ ದಿನಗಳಲ್ಲಿ ಸದರಿಯವರ ನೀರಾವರಿ ಸ್ಥಾವರಕ್ಕೆ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. |
| 3 | ವಿನೋದ್ ಕುಮಾರ್, ಕರವೇ ಅಧ್ಯಕ್ಷರು, ಹನೂರು, | *H1L-4589 ಸ್ಥಾವರವು ಸುಮಾರು 5 ವರ್ಷಗಳಿಂದ ಉಪಯೋಗಿಸುತ್ತಿರುವುದಿಲ್ಲ Idle ಆಗಿದ್ದು ನಿಗಮದ ನೌಕರರು ವಿದ್ಯುತ್ ಸಂಪರ್ಕವನ್ನು ತೆಗೆಯಲು ಮುಂದಾಗಿರುತ್ತಾರೆಂದು ತಿಳಿಸಿರುತ್ತಾರೆ. | *ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| 4 | ವಿ.ನಾಗೇಂದ್ರ, ಹನೂರು. | *ಸ್ಥಾವರ ಸಂಖ್ಯೆ: HL-464, HL-599, MNR ಆಗಿದೆ ಎಂದು ಗ್ರಾಹಕರಿಗೆ ತಿಳಿದಿರುವುದಿಲ್ಲ, ಹಾಗೂ ಎಂ.ಎನ್.ಆರ್. ಮಾಪಕವನ್ನು ಬದಲಾಯಿಸಲು ಕೋರಿರುತ್ತಾರೆ. | *ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಶಾಖಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಮಾಪಕ ಬದಲಾವಣೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| 5 | ಕರಿಯಪ್ಪ, ಅಧ್ಯಕ್ಷರು, ರೈತ ಸಂಘ, ಚಂಗಡಿ | *ಎಂ.ಜಿ.ದೊಡ್ಡಿ ಗ್ರಾಮದ ಮಾದಪ್ಪ, ರವರಿಗೆ ಅಕ್ರಮ-ಸಕ್ರಮ ಯೋಜನೆಯಲ್ಲಿ ಪರಿವರ್ತಕವನ್ನು ಅಳವಡಿಸಿದ್ದು ಇದುವರೆವಿಗೂ ಚಾಲನೆಗೊಳಿಸಿರುವುದಿಲ್ಲ. | *ಉಪವಿದ್ಯುತ್ ಪರಿವೀಕ್ಷಕರಿಂದ ತಪಾಸಣೆಗೊಂಡ ನಂತರ ಸದರಿ ಪರಿವರ್ತಕವನ್ನು ಚಾಲನೆಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. ಹಾಗೂ ಹಿಂದಿನ ಸಭೆಯಲ್ಲಿ ಚಂಗಡಿ ಗ್ರಾಮಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಲಾದ ವಿಷಯಗಳಿಗೆ ಕ್ರಮ ಕೈಗೊಂಡಿರುವ ಬಗ್ಗೆ ಮಾಹಿತಿಯನ್ನು ನೀಡಲಾಯಿತು. |
| 6 | ಗಿರೀಶ್, ಕರವೇ ಕಾರ್ಯದರ್ಶಿ, ಹನೂರು. | *ಹನೂರು ಪಟ್ಟಣ ಕೆ.ಇ.ಬಿ. ಕಛೇರಿಯ ಮುಂಭಾಗ ಇರುವ 11 ಕೆವಿ ವಿದ್ಯುತ್ ಮಾರ್ಗವು ಲೊಕ್ಕನಹಳ್ಳಿಗೆ ಹಾದು ಹೋಗಿದ್ದು ಸದರಿ ವಿದ್ಯುತ್ ಮಾರ್ಗದಿಂದ ಸುಮಾರು 15 ರಿಂದ 20 ಮನೆಗಳಿಗೆ ತೊಂದರೆಯಾಗಿದ್ದು ಸರಿಪಡಿಸಿಕೊಡಲು ಕೋರಿರುತ್ತಾರೆ. | *ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ಮಾಡಿ ವಿದ್ಯುತ್ ಮಾರ್ಗವನ್ನು ಸೂಕ್ತ ಸ್ಥಳಕ್ಕೆ ಬದಲಾಯಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚನೆ ನೀಡಲಾಯಿತು. |
| 7 | ಕರಿಯಪ್ಪ, ಅಧ್ಯಕ್ಷರು, ರೈತ ಸಂಘ, ಚಂಗಡಿ | *ಕೌದಳ್ಳಿ ಶಾಖೆಯ ಜ್ಯೋತಿ ಪುರ ಗ್ರಾಮದ ಪರಿವರ್ತಕವು ಪದೇ ಪದೇ ವಿಫಲಗೊಳ್ಳುತ್ತಿದ್ದು ಪರಿವರ್ತಕ ಕೇಂದ್ರದ ತಂತ್ರಜ್ಞರು ಸರಿಯಾಗಿ ಪರಿವರ್ತಕಗಳನ್ನು ರಿಪೇರಿ ಮಾಡದೆ ಪದೇ ಪದೇ ವಿಫಲಗೊಳ್ಳುತ್ತಿದ್ದು ಸದರಿ ಪರಿವರ್ತಕ ಕೇಂದ್ರದ ತಂತ್ರಜ್ಞರು ಸೂಕ್ತ ಮಾರ್ಗದರ್ಶನ ನೀಡಲು ಕೋರಿರುತ್ತಾರೆ, | *ಪರಿವರ್ತಕಗಳು ಪದೇ ಪದೇ ವಿಫಲಗೊಳ್ಳುತ್ತಿರುವುದಕ್ಕೆ ಕಾರಣ ಆ ಭಾಗದಲ್ಲಿ ಬರುವ ಸ್ಥಾವರಗಳ ಭಾರದ ಬಗ್ಗೆ ಮಾಹಿತಿ ಇಲ್ಲದೆ ಇರುವುದು ಅಂದರೆ ಅಕ್ರಮ ನೀರಾವರಿ ಪಂಪ್ ಸೆಟ್‌ಗಳು ವಿದ್ಯುತ್ ಜಾಲಕ್ಕೆ ಸೇರ್ಪಡೆಯಾಗುವುದು. ಆದ್ದರಿಂದ ಪರಿವರ್ತಕವನ್ನು ಅಳವಡಿಸಿದ ತಕ್ಷಣ |

| | | | |
|---|---|---|---|
| | | *ಸದರಿ ಗ್ರಾಹಕರು ಮಾತನಾಡಿ ಹನೂರು ಉಪವಿಭಾಗದಲ್ಲಿ ಪರಿವರ್ತಕ ದುರಸ್ಥಿ ಕೇಂದ್ರವನ್ನು ತೆರೆಯಲು ಒತ್ತಾಯಿಸಿರುತ್ತಾರೆ. | ಪರಿವರ್ತಕಗಳು ವಿಫಲಗೊಳ್ಳುತ್ತಿದೆ ಗ್ರಾಮಸ್ಥರುಗಳಾದ ತಾವು ಅಕ್ರಮವಾಗಿ ಹಾಕಿಕೊಂಡಿರುವ ನೀರಾವರಿ ಪಂಪ್ ಸೆಟ್‌ಗಳು ತಮ್ಮ ಗಮನಕ್ಕೆ ಬಂದರೆ ತಕ್ಷಣ ನಮಗೆ ತಿಳಿಸಿದ್ದಲ್ಲಿ ಅವುಗಳ ಸಂಪರ್ಕ ಕಡಿತಗೊಳಿಸುವುದರಿಂದ ಪದೇ ಪದೇ ಪರಿವರ್ತಕ ವಿಫಲಗೊಳ್ಳುವುದನ್ನು ತಡೆಯಬಹುದು ಎಂದು ಅಧೀಕ್ಷಕ ಇಂಜಿನಿಯರ್(ವಿ) ರವರು ತಿಳಿಸಿದರು ಹಾಗೂ ಪರಿವರ್ತಕಗಳನ್ನು ದುರಸ್ಥಿಗೊಳಿಸಿದ ನಂತರ ಕೂಲಂಕುಷವಾಗಿ ತಪಾಸಣೆಗೊಳಿಸಿದ ನಂತರವೇ ಪರಿವರ್ತಕವನ್ನು ಅಳವಡಿಸಲಾಗುತ್ತದೆಂದು ಎಂದು ತಿಳಿಸಿಲಾಯಿತು.<br>*ಹನೂರು ಉಪವಿಭಾಗದಲ್ಲಿ ಪರಿವರ್ತಕ ದುರಸ್ಥಿ ಕೇಂದ್ರವನ್ನು ಸ್ಥಾಪಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಮುಂದಿನ ದಿನಗಳಲ್ಲಿ ಪರಿವರ್ತಕ ದುರಸ್ಥಿ ಕೇಂದವನ್ನು ತೆರೆದು ಗ್ರಾಹಕರಿಗೆ ಅನುಕೂಲ ಮಾಡಿಕೊಡಲಾಗುವುದೆಂದು ತಿಳಿಸಲಾಯಿತು. |
| 8 | ನಾರಾಯಣ ಶೆಟ್ಟಿ, ಶೆಟ್ಟಳ್ಳಿ, | *ಕುಡಿಯುವ ನೀರಿನ ಸರಬರಾಜಿಗೆ ಪರಿವರ್ತಕವನ್ನು ಅಳವಡಿಸಿಕೊಡಲು ಕೋರಿರುತ್ತಾರೆ, | *ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಕುಡಿಯುವ ನೀರಿನ ಸರಬರಾಜು ಸ್ಥಾವರಗಳಿಗೆ ಪರಿವರ್ತಕವನ್ನು ಅಳವಡಿಸಲು ಹೊಸದಾಗಿ ಟೆಂಡರ್ ನೀಡಲಾಗಿದ್ದು ಶೀಘ್ರದಲ್ಲಿ ಪರಿವರ್ತಕವನ್ನು ಅಳವಡಿಸಿಕೊಡಲು ಸೂಚನೆ ನೀಡಲಾಗುವುದೆಂದು ತಿಳಿಸಲಾಯಿತು. |
| 9 | ಸಿದ್ದಲಿಂಗಸ್ವಾಮಿ, ಮಾಳಿಗನತ್ತ. | *ನನಗೆ ನಾಲ್ಕು ಸಂಖ್ಯೆಯ ಪುಂಪುಸೆಟ್ಟುಗಳಿದ್ದು ಪರಿವರ್ತಕವನ್ನು ಅಳವಡಿಸಿಕೊಡಲು ಈಗಾಗಲೇ ಕೋರಿದ್ದು ಪರಿವರ್ತಕವನ್ನು ಅಳವಡಿಸಲು ಮೂಲಭೂತ ಸೌಕರ್ಯಗಳಾದ ವಿದ್ಯುತ್ ಮಾರ್ಗವನ್ನು ಅಳವಡಿಸಿದ್ದು ಪರಿವರ್ತಕವನ್ನು ಅಳವಡಿಸಿರುವುದಿಲ್ಲ, ತುರ್ತಾಗಿ ಪರಿವರ್ತಕವನ್ನು ಅಳವಡಿಸಿಕೊಡಲು ಕೋರಿರುತ್ತಾರೆ. | *ಪರಿವರ್ತಕವನ್ನು ಅಳವಡಿಸಲು ಕಾರ್ಯಾದೇಶವನ್ನು ಪಡೆದಿರುವ ವಿದ್ಯುತ್ ಗುತ್ತಿಗೆದಾರರಿಗೆ ಸೂಕ್ತ ಮಾರ್ಗದರ್ಶನ ನೀಡಲಾಗುವುದೆಂದು ತಿಳಿಸಲಾಯಿತು. |
| 10 | ಜಡೇಸ್ವಾಮಿ, ಉದ್ದನೂರು. | *ಉದ್ದನೂರಿನಲ್ಲಿ ಜಮೀನಿದ್ದು ಸದರಿ ಜಮೀನಿನ ಮೇಲೆ ವಿದ್ಯುತ್ ಮಾರ್ಗವು ಹಾದು ಹೋಗಿದ್ದು ಸದರಿ ವಿದ್ಯುತ್ ಮಾರ್ಗದ ವಾಹಕಗಳು ತುಂಬಾ ಕೆಳಮಟ್ಟದಲ್ಲಿದ್ದು ಬೆಳೆಗಳಿಗೆ ವಾಹಕವು ತಗಲುತ್ತಿದ್ದು ಅಪಾಯವಾಗುವ ಸಂಭವವಿರುವುದರಿಂದ ಸರಿಪಡಿಸಿಕೊಡಲು ಕೋರಿರುತ್ತಾರೆ. | *ಮೆ॥ಪ್ರಗತಿ ಎಲೆಕ್ಟ್ರಿಕಲ್ಸ್ ಹನೂರು, ರವರಿಗೆ ಸದರಿ ಜಮೀನಿನಲ್ಲಿ ಜೋತು ಬಿದ್ದಿರುವ ವಿದ್ಯುತ್ ಮಾರ್ಗವನ್ನು ಸರಿಪಡಿಸಲು ಕಾರ್ಯಾದೇಶ ಸಂಖ್ಯೆ:ಪಿ-4389/25.11.2016 ರಲ್ಲಿ ಕಾರ್ಯಾದೇಶಗೊಂಡಿದ್ದು ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದೆಂದು ತಿಳಿಸಲಾಯಿತು. |
| 11 | ವಿನೋದ್ ಕುಮಾರ್, ಕರವೇ ಅಧ್ಯಕ್ಷರು, ಹನೂರು, | *ನಿರಂಜನಮೂರ್ತಿ, ಶಾಗ್ಯ, ಮಹದೇವಸ್ವಾಮಿ, ಶಾಗ್ಯ, ಮಲ್ಲೇಶ ಬಿನ್ ಸಿದ್ದಪ್ಪ, ಶಾಗ್ಯ, ಶ್ರೀಮತಿ.ಸುಮಾ ಕೋಂ ಬಸವಣ್ಣ, ಶಾಗ್ಯ, ರವರಿಗೆ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿ 1 ವರ್ಷವಾಗಿದ್ದು ಇದುವರೆವಿಗೂ ಅಗತ್ಯ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. | *ಈಗಾಗಲೇ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿರುವ ಗ್ರಾಹಕರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲು ಟೆಂಡರ್ ನೀಡಲಾಗಿದ್ದು ಜ್ಯೇಷ್ಠತೆ ಆಧಾರದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. |

| | | | |
|---|---|---|---|
| 12 | ಎಸ್.ಅಭಿಷೇಕ್, ಉದ್ದನೂರು, | *ಉದ್ದನೂರು ಗ್ರಾಮದ ಪರಿವರ್ತಕವು ಅಧಿಕ ಭಾರದಿಂದ ಕೂಡಿದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಕೋರಿರುತ್ತಾರೆ. | *ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಯಿತು. |
| 13 | ವೆಂಕಟಾಚಲ, ರಾಮಾಪುರ | *ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು ಇದುವರೆವಿಗೂ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. | *ಈಗಾಗಲೇ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿರುವ ಗ್ರಾಹಕರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲು ಟೆಂಡರ್ ನೀಡಲಾಗಿದ್ದು ಜ್ಯೇಷ್ಠತೆ ಆಧಾರದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. |
| 14 | ಆರಿಕ್‌ರಾಜ್, ಎಂ.ಜಿ.ದೊಡ್ಡಿ, | *ಎಂ.ಜಿ.ದೊಡ್ಡಿ ಗ್ರಾಮದ 250 ಕೆವಿಎ ಪರಿವರ್ತಕವು ಅಧಿಕ ಭಾರದಿಂದ ಕೂಡಿದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡಲು ಕೋರಿರುತ್ತಾರೆ. | *ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಯಿತು. |

ತಮ್ಮ ವಿಶ್ವಾಸಿ,

ಅಧೀಕ್ಷಕ ಇಂಜಿನಿಯರ್ (ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಕೊಳ್ಳೇಗಾಲ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಹನೂರು ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.